

ವರ್ಷದ ಒಳಗಿನ ಪುಟ್ಟ ಬಾಲಿಕೆಗೆ ದೇವಿಯ ಅಲಂಕಾರವನ್ನು ಮಾಡುತ್ತಾರೆ. ಒಂದು ಎತ್ತರವಾದ ಪೀಠದಲ್ಲಿ ಕುಳ್ಳಿರಿಸಿ ಷೋಡಶೋಪಚಾರ ಪೂಜೆಯನ್ನು ಸಲ್ಲಿಸುತ್ತಾರೆ. ಆಕೆ ಸಾಕ್ಷಾತ್ ದೇವಿಯೇ ಎಂಬ ಭಾವನೆಯಿಂದ ಭಕ್ತರು ನಮಸ್ಕರಿಸಿ, 'ತಾವು ಧನ್ಯರು' ಎಂದುಕೊಳ್ಳುತ್ತಾರೆ.

ಮಹಾಷ್ಟಮಿಯ ಕೊನೆಯ ೨೪ ನಿಮಿಷಗಳು ಮತ್ತು ನವಮಿಯ ಮೊದಲ ೨೪ ನಿಮಿಷಗಳನ್ನು (ಒಟ್ಟು ೪೮ ನಿಮಿಷಗಳು) 'ಉಮಾಮಹೇಶ್ವರ ತಿಥಿ' ಎನ್ನುತ್ತಾರೆ. ಈ ಸಂಧಿವೇಳೆಯಲ್ಲಿ ಮಾಡುವ ದೈತ್ಯ ಚಂಡ-ಮುಂಡದಲನಿ ಚಾಮುಂಡಾದೇವಿಯ ಪೂಜೆಯು ಅತ್ಯಂತ ಪ್ರಶಸ್ತ ಹಾಗೂ ಫಲಪ್ರದವಾದುದು ಎಂಬ ನಂಬಿಕೆಯಿದೆ. ೪೮ ನಿಮಿಷಗಳ ಈ ಸಂಧಿಕಾಲವು ಮಧ್ಯರಾತ್ರಿಯ ಸಮಯದಲ್ಲಿ ಬಂದರೆ ಆ ಸಮಯದಲ್ಲಿ ಮಾಡಿದ ಪೂಜೆಗೆ ಹತ್ತು ಪಾಲು ಹೆಚ್ಚು ಫಲವಂತೆ! ಕೇವಲ ೪೮ ನಿಮಿಷಗಳ ಅವಧಿಯಲ್ಲಿ ದೇವಿಗೆ ಷೋಡಶೋಪಚಾರವನ್ನು ಮಾಡಬೇಕು. ಹಾಗೆಯೇ ಬಲಿ (ರಾಜಸಿಕ ಪೂಜೆಯಲ್ಲಿ ಪಶುಬಲಿ; ಸಾತ್ವಿಕ ಪೂಜೆಯಲ್ಲಿ ಬೂದುಗುಂಬಳವನ್ನು ತುಂಡರಿಸುವುದು), ಅನ್ನ ನೈವೇದ್ಯ, ಹಣ್ಣು, ಸಿಹಿತಿಂಡಿಗಳ ನೈವೇದ್ಯ ಮುಂತಾದ ಸಕಲ ವಿಧಿಗಳೂ ನಡೆಯುತ್ತವೆ. ದೇವಿಗೆ ೧೦೮ ಕೆಂದಾವರೆ ಹೂವುಗಳ ಸಮರ್ಪಣೆ ಹಾಗೂ ೧೦೮ ಹಣತೆ ದೀಪಗಳ ಉಪಚಾರಗಳು ಈ ಸಂಧಿಪೂಜೆಯ ವೈಶಿಷ್ಟ್ಯಗಳಾಗಿವೆ. ಈ ಪೂಜೆಯ ಮೂಲಕ ಜೀವನದ ಪ್ರತಿಯೊಂದು ಗಳಿಗೆಯಲ್ಲಿಯೂ ದೇವಿಗೆ ತಮ್ಮ ಸರ್ವಸ್ವವನ್ನೂ ಸಮರ್ಪಿಸುವ ಸಂಕಲ್ಪವನ್ನು ಭಕ್ತರು ಕೈಗೊಳ್ಳುತ್ತಾರೆ; ಆಕೆಯ ಮಹಾನ್‌ಶಕ್ತಿಗೆ ಶರಣಾಗುತ್ತ, ಆತ್ಮಜ್ಯೋತಿಯನ್ನು ಬೆಳಗಿಸೆಂದು ಭಾವಪೂರ್ಣವಾಗಿ ಪ್ರಾರ್ಥಿಸಿಕೊಳ್ಳುತ್ತಾರೆ. ಈ 'ಉಮಾ-ಮಹೇಶ್ವರ ತಿಥಿ'ಯಲ್ಲಿ ಮಾಡಿದ ಜಪಧ್ಯಾನಗಳು ಕೂಡ ಅತ್ಯಂತ ಫಲದಾಯಕವಾಗುತ್ತವೆ.

ಕಡೆಯ ದಿನವಾದ ಮಹಾನವಮಿಯ ಪೂಜೆಯು ಹೋಮ-ಹವನಗಳಿಂದ ಕೊನೆಗೊಳ್ಳುತ್ತದೆ. ಇನ್ನು ದಶಮಿಯ ದಿನದಂದು ಶ್ರೀದೇವಿಯ ಪ್ರತಿಮೆಯನ್ನು ವಿಸರ್ಜಿಸಲಾಗುತ್ತದೆ. ಈ ಸಂದರ್ಭದಲ್ಲಿ ಭಕ್ತರು ಬಹಳ ಭಾವೋನ್ಮತ್ತರಾಗಿ, ದೇವಿಗೆ ವಿದಾಯವನ್ನು ಹೇಳುತ್ತಾರೆ. ಮಹಾಷಷ್ಠಿಯಂದು ವಿಶ್ವಪ್ರಕೃತಿಯನ್ನೇ ತಮ್ಮ ಸ್ವಂತಪುತ್ರಿಯೆಂಬ ಭಾವನೆಯಿಂದ ಭಕ್ತರು ಆಹ್ವಾನಿಸಿರುತ್ತಾರೆ. ಮಹಾಸಪ್ತಮಿ, ಮಹಾಷ್ಟಮಿ ಮತ್ತು ಮಹಾನವಮಿಗಳಂದು ದೇವಿಗೆ ಸಂಭ್ರಮದಿಂದ ಸತ್ಕಾರವನ್ನು ಕೂಡ ಮಾಡಿರುತ್ತಾರೆ. ಅನಂತರ ದಶಮಿಯಂದು ಪರಿವಾರ ಸಮೇತ ಆಕೆಯನ್ನು ಪತಿಗೃಹಕ್ಕೆ ಕಳಿಸಿಕೊಡುತ್ತಾರೆ.

ದುರ್ಗಾಮೂರ್ತಿಯನ್ನು ನದಿಯಲ್ಲಿ ವಿಸರ್ಜಿಸುವ ಮುನ್ನ ಮುತ್ತೈದೆಯರು 'ಸಿಂದೂರ ಖೇಲಾ'ದಲ್ಲಿ ಭಾಗವಹಿಸುತ್ತಾರೆ. ಈ ಕಾರ್ಯಕ್ರಮದಲ್ಲಿ ಮಹಿಳೆಯರು ಒಬ್ಬೊಬ್ಬರಾಗಿ ದೇವೀಮೂರ್ತಿಯ ಹಣೆಗೆ ಸಿಂದೂರ ತಿಲಕವಿಟ್ಟು, ಮನೆಗಳಲ್ಲಿ ತಾವೇ ಕೈಯಾರೆ ಪ್ರೀತಿಯಿಂದ ತಯಾರಿಸಿದ ಸಿಹಿತಿಂಡಿಗಳನ್ನು ತಿನ್ನಿಸುತ್ತಾರೆ. ತಿನ್ನಿಸುವಾಗ ದೇವಿಯ ಕಿವಿಯಲ್ಲಿ, "ಮತ್ತೆ ಮುಂದಿನ ವರ್ಷ ಬಾರಮ್ಮ" ಎಂದು ಮೆಲುದನಿಯಲ್ಲಿ ಆಕೆಯನ್ನು ಕೇಳಿಕೊಳ್ಳುತ್ತಾರೆ. ಬಳಿಕ ಇತರರ ಹಣೆಗೂ ಸಿಂದೂರವನ್ನು ಹಚ್ಚಿ ಆನಂದಿಸುತ್ತಾರೆ. ನಿಜವಾಗಿಯೂ ಈ ದೃಶ್ಯವು ನೋಡುವಂಥದ್ದು.

ತದನಂತರ, ಭಕ್ತಾದಿಗಳು ಪೂಜಾಮಂಟಪದಿಂದ ಹಿಡಿದು ನದಿ ಅಥವಾ ಸರೋವರದ ತನಕ ದೇವಿಯ ಮೆರವಣಿಗೆಯನ್ನು ಮಾಡುತ್ತಾರೆ. ರಸ್ತೆಯುದ್ದಕ್ಕೂ ಹಾಡುತ್ತ ಕುಣಿಯುತ್ತಿರುತ್ತಾರೆ. ತಾಯಿಯ ವಿಗ್ರಹವನ್ನು ನೀರಿನಲ್ಲಿ ವಿಸರ್ಜಿಸುವಾಗ ಭಕ್ತರ ಮನಸ್ಸಿನಲ್ಲಿ ದುಃಖವು ಒತ್ತಿಬರುತ್ತದೆ. ಆದರೂ, "ಅಮ್ಮಾ, ಎಲ್ಲರನ್ನೂ ಆಶೀರ್ವದಿಸು. ನಮ್ಮ ಮನವನ್ನು ಸುಂದರಗೊಳಿಸು. ಜೀವನ ಸಂಗ್ರಾಮದಲ್ಲಿ ನಮ್ಮನ್ನು ಕೈಬಿಡದೆ ಕಾಪಾಡುತ್ತ ವಿಜಯಿಗಳನ್ನಾಗಿ ಮಾಡು. ಈ ವಿಜಯದ ಫಲವಾದ ಯಶಸ್ಸು ನಮ್ಮದಾಗಲಿ. ನಮ್ಮ ಜೀವನವನ್ನು ಹಾಳುಗೆಡಹುವ ಕಾಮ, ಕ್ರೋಧ ಮುಂತಾದ ಷಡ್‌ರಿಪುಗಳು ಬಲಹೀನವಾಗಲಿ" ಎಂದು ಕೋರುತ್ತ, ಆಕೆಯ ದಿವ್ಯಮೂರ್ತಿಯನ್ನು ಹೃದಯಾಂತರಾಳದಲ್ಲಿ ಧರಿಸಿ ಧನ್ಯರಾಗುತ್ತಾರೆ.

ಶಾಂತಿಜಲದ ಸಿಂಪಡಿಕೆಯೊಂದಿಗೆ ಒಟ್ಟಾರೆ ಐದು ದಿನಗಳ ಶ್ರೀದುರ್ಗಾಪೂಜಾ ಉತ್ಸವವು ಸಮಾಪ್ತವಾಗುತ್ತದೆ. ಕಿರಿಯರೆಲ್ಲ ಸೇರಿ ಉಲ್ಲಾಸದಿಂದ ಹಿರಿಯರಿಗೆ, **'ವಿಜಯಾ ಪ್ರಣಾಮ'**ವನ್ನು ಸಲ್ಲಿಸಿ, ಆಶೀರ್ವಾದವನ್ನು ಪಡೆದು ಕೃತಾರ್ಥರಾಗುತ್ತಾರೆ. ಪರಸ್ಪರ ಆಲಿಂಗಿಸುತ್ತ, **'ಶುಭ ವಿಜಯಾ'** ಎಂದು ಪರಸ್ಪರ ಹಾರೈಕೆಗಳನ್ನು ಆಶಿಸುತ್ತ ಎಲ್ಲೆಡೆಯೂ ಸಂತಸವನ್ನು ಬೀರುತ್ತಾರೆ. ವರ್ಷವರ್ಷವೂ ಆನಂದೋತ್ಸಾಹಗಳಿಂದ ಆಚರಿಸಲ್ಪಡುವ ಈ ದೇವೀಪರ್ವವು ನಮ್ಮೆಲ್ಲರಲ್ಲಿ ಅಡಗಿರುವ ಮಹಾದೈತ್ಯನಾದ ಜ್ಞಾನಾಂಧಕಾರವನ್ನು ನಾಶಮಾಡಿ ಆತ್ಮಜ್ಯೋತಿಯನ್ನು ಬೆಳಗಿಸಲಿ!


**ಆಧಾರ ಗ್ರಂಥಗಳು:**

**೧. ರಾಮಕೃಷ್ಣ ಮಹಾಸಂಘದ ಬಂಗಾಳಿ ಮಾಸಪತ್ರಿಕೆ 'ಉದ್ಬೋಧನ' ಹಳೆಯ ಸಂಚಿಕೆಗಳು. ೨. ಶ್ರೀಶಾರದಾ ಮಠದ ಪತ್ರಿಕೆ 'ನಿಬೋಧತಾ' ಹಳೆಯ ಸಂಚಿಕೆಗಳು ೩. *ದುರ್ಗಾ, ದುರ್ಗಾರ್ಚನ್ ಉ ನವರಾತ್ರ ವ್ರತ್* – ಮೊದಲ ಭಾಗ (ಬಂಗಾಳಿ ಗ್ರಂಥ) ೩. *ಸಾಧನ್ ಸಮರ್* – ಭಾಗ ೧ (ಬಂಗಾಳಿ ಗ್ರಂಥ); ಲೇಖಕರು: ಬ್ರಹ್ಮಚಾರಿ ಶ್ರೀ ಸತ್ಯದೇವ.**


⌘